ವಿಷಯ :– ಬೇಲೂರಿನಲ್ಲಿ ಕೈಗಾರಿಕಾ ಎಸ್ಟೇಟ್.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 479 (967)

ಶ್ರೀ ಬಿ. ಹೆಚ್. ಲಕ್ಷ್ಮಣಯ್ಯ (ಬೇಲೂರು) :– ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೇಲೂರಿನಲ್ಲಿ ಕೈಗಾರಿಕಾ ಎಸ್ಟೇಟ್ ಪ್ರಾರಂಭಿಸಲು ಸರ್ಕಾರ ಪ್ರಯತ್ನಿಸಿತ್ತೇ? ಹಾಗಿದ್ದರೆ ಯಾವಾಗ ಹಾಗೂ ಈಗ ಯಾವ ಹಂತದಲ್ಲಿದೆ ?

ಆ) ತಾಲ್ಲೂಕು ಮಟ್ಟದ ಕೈಗಾರಿಕಾ ಎಸ್ಟೇಟ್ ನಿರ್ಮಿಸಲು ಎಷ್ಟು ಎಕರೆ ಜಮೀನು ಬೇಕಾಗುತ್ತದೆಂದು ಸರ್ಕಾರ ಯೋಚಿಸಿದೆ, ಬೇಲೂರಿನಲ್ಲಿ ಎಷ್ಟು ಎಕರೆ ಪ್ರದೇಶ ಕೈಗಾರಿಕಾ ಎಸ್ಟೇಟಿಗಾಗಿ ಮೀಸಲಿರಿಸಿದೆ ?

ಶ್ರೀ ನಸೀರ್ ಅಹಮದ್ (ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು) :–

ಅ) ಹೌದು. ಬೇಲೂರು ತಾಲ್ಲೂಕಿನ ಹುಣಸೆಕೆರೆ ಗ್ರಾಮದಲ್ಲಿ 10 ಎಕರೆ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲು 1985 ನೇ ಇಸವಿಯಿಂದ ಕ್ರಮ ಕೈಗೊಳ್ಳಲಾಗಿದೆ.

ಆ) ಕೈಗಾರಿಕಾ ವಸಾಹತುಗಳನ್ನು ಸ್ಥಾಪಿಸಲು ಸ್ಥಳೀಯ ಉದ್ದಿಮೆದಾರರ ಬೇಡಿಕೆಯ ಮೇಲೆ ಅವಲಂಬಿಸಿದೆ. ಬೇಲೂರಿನಲ್ಲಿ ಕೈಗಾರಿಕಾ ವಸಾಹತುವಿನ ಸ್ಥಾಪನೆಗಾಗಿ 10 ಎಕರೆ ಜಮೀನನ್ನು ವಶ ಪಡಿಸಿಕೊಳ್ಳಲಾಗುತ್ತಿದೆ. ತಾಲ್ಲೂಕು ಮಟ್ಟದಲ್ಲಿ ಕೈಗಾರಿಕಾ ವಸಾಹತುವಿನ ಸ್ಥಾಪನೆಗೆ ಕನಿಷ್ಠ ಎರಡು ಎಕರೆ ಜಮೀನಿನ ಅವಶ್ಯಕತೆ ಇರುತ್ತದೆ.

ವಿಷಯ :– ಕೆ. ಇ. ಬಿ. ಸಹಾಯಕ ಕಾರ್ಯಕಾರಿ ಅಭಿಯಂತರರ ಕಛೇರಿಯನ್ನು ತೆರೆಯುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 480 (859)

ಶ್ರೀ ಮಂಜುನಾಥ್ ಚೆನ್ನಪ್ಪ ಕುನ್ನೂರ್ (ಶಿಗ್ಗಾಂವ) :– ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸವಣೂರು ತಾಲೂಕಿಗೊಂದು ಕೆ. ಇ. ಬಿ. ಸಹಾಯಕ ಕಾರ್ಯಕಾರಿ ಅಭಿಯಂತರರ ಕಛೇರಿಯನ್ನು ತೆರೆಯುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆಯೇ ?

ಆ) ಹಾಗಿದ್ದಲ್ಲಿ ಇನ್ನು ಎಷ್ಟು ದಿವಸಗಳಲ್ಲಿ ಸದರಿ ಕಛೇರಿಯನ್ನು ಪ್ರಾರಂಭ ಮಾಡಲಾಗುವುದು ?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :–

ಅ) ಹೌದು, ಪರಿಶೀಲನೆಯಲ್ಲಿದೆ.

ಆ) ಇನ್ನೂ ಪರಿಶೀಲನೆಯಲ್ಲಿರುವುದರಿಂದ ಉದ್ಭವಿಸುವುದಿಲ್ಲ.

ವಿಷಯ :– ಮೈಸೂರು ಸಕ್ಕರೆ ಕಾರ್ಖಾನೆ ರೈತರುಗಳಿಗೆ ಬೋನಸ್ ಪಾವತಿ ಮಾಡುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 483 (857) :

ಶ್ರೀ ಎಂ. ಎಸ್. ಆತ್ಮಾನಂದ (ಮಂಡ್ಯ) :– ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯದಲ್ಲಿರುವ ಮೈಸೂರು ಸಕ್ಕರೆ ಕಾರ್ಖಾನೆಯು ಕ್ರಮವಾಗಿ 1988–89 ನೇ ಸಾಲಿನಲ್ಲಿ ಮತ್ತು 1989–90 ನೇ ಸಾಲಿನಲ್ಲಿ ಅರೆದ ಕಬ್ಬಿನ ಪ್ರಮಾಣ ಹಾಗೂ ಉತ್ಪಾದಿಸಿದ ಸಕ್ಕರೆಯ ಪ್ರಮಾಣವೆಷ್ಟು?

ಆ) ಈ ಎರಡು ಸಾಲುಗಳಲ್ಲಿ ಮೈಸೂರು ಸಕ್ಕರೆ ಕಾರ್ಖಾನೆ ಗಳಿಸಿದ ಅಂದಾಜು ಲಾಭವೆಷ್ಟು ?